

## ನಕ್ಕುಬಿಡಿ

ವ್ಯಕ್ತಿ: ಹಲೊ ಜಂಟಲ್‌ಮನ್, ಈ ಕಲ್ಲುಗಳನ್ನೆಲ್ಲಾ ನಿಮ್ಮ ಚೀಲಕ್ಕೆ ಏಕೆ ತುಂಬಿಸಿಕೊಳ್ಳುತ್ತಿದ್ದೀರ?
ಯುವಕ: ಇಂದು ಸಂಜೆ 5 ಗಂಟೆಗೆ ಈ ವೇದಿಕೆಯಲ್ಲಿ ಒಂದು ಕವಿಗೋಷ್ಠಿಯಿದೆ.
ವ್ಯಕ್ತಿ: ಕಲ್ಲಿಗೂ, ಕವಿಗೋಷ್ಠಿಗೂ ಏನು ಸಂಬಂಧ?
ಯುವಕ: ಕವಿಗೋಷ್ಠಿಯಲ್ಲಿ ನಾನು ಒಬ್ಬ ಕವಿಯಾಗಿ ಕವನ ಓದುವವನಿದ್ದೇನೆ. ಮುನ್ನೆಚ್ಚರಿಕೆಗಾಗಿ ಕಲ್ಲುಗಳನ್ನು ತುಂಬುತ್ತಿದ್ದೇನೆ!

***

ಕೆಲವು ಕಳ್ಳರು ನಗರದಲ್ಲಿ ಹೋಗುತ್ತಿರುವಾಗ ಒಂದು ದೃಶ್ಯವನ್ನು ನೋಡಿದರು. ಅಲ್ಲಿ ಡೊಂಬರಾಟ ನಡೆಯುತ್ತಿತ್ತು. ಹೆಂಗಸು ಡೋಲು ಬಾರಿಸುತ್ತಿದ್ದಳು. ಒಬ್ಬ ಲಾಗ ಹಾಕಿ ಎರಡು ಅಂತಸ್ತಿನಷ್ಟು ಎತ್ತರದಲ್ಲಿ ಕಟ್ಟಿದ್ದ ಹಗ್ಗದ ಮೇಲೆ ಲೀಲಾಜಾಲವಾಗಿ ನಡೆಯಲಾರಂಭಿಸಿದ. ಈ ದೃಶ್ಯ ನೋಡಿ ಕಳ್ಳರಿಗೆ ಆಶ್ಚರ್ಯವಾಯಿತು. ಈ ಲಾಗ ಹಾಕುವವನನ್ನು ನಾವು ಅಪಹರಿಸಿ, ನಮ್ಮವನನ್ನಾಗಿ ಮಾಡಿಕೊಂಡರೆ ಅಂತಸ್ತುಗಳ ಮನೆಗಳಿಗೂ ಕನ್ನ ಹಾಕಲು ಅನುಕೂಲವಾಗುತ್ತದೆ ಎಂಬ ಯೋಚನೆ ಕಳ್ಳರಿಗೆ ಬಂತು. ಡೊಂಬರಾಟ ಮುಗಿದ ನಂತರ, ತುಂಬಾ ಚಾಕಚಕ್ಯತೆಯಿಂದ ಕಳ್ಳರು ಲಾಗ ಹಾಕುವವನನ್ನು ಅಪಹರಿಸಿ, ತಮ್ಮೊಂದಿಗೆ ಕರೆದೊಯ್ದರು. ಮರುದಿನ ಅವರು ಒಂದು ಹಳ್ಳಿಗೆ ಬಂದರು. ನಡುರಾತ್ರಿಯಾದಾಗ ಕಳ್ಳರು ಲಾಗ ಹಾಕುವವನಿಗೆ ಎರಡು ಅಂತಸ್ತಿನ ಮನೆಯೊಂದನ್ನು ತೋರಿಸಿ ಹೇಳಿದರು, 'ಮೇಲಿನ ಕಿಟಿಕಿ ಮುಚ್ಚಿಲ್ಲ, ಅದರೊಳಗೆ ನುಗ್ಗಿ, ಒಳಗೆ ಹೋಗಿ ಮುಂದಿನ ಬಾಗಿಲನ್ನು ತೆರೆದುಬಿಡು, ಉಳಿದಿದ್ದನ್ನು ನಾವು ನೋಡಿಕೊಳ್ಳುತ್ತೇವೆ' ಎಂದು. ಆದರೆ ಕಳ್ಳರು ಎಷ್ಟೇ ಹೇಳಿದರೂ ಲಾಗ ಹಾಕುವವನು ಮಾತ್ರ ಕಲ್ಲಿನಂತೆ ನಿಂತಿದ್ದ. 'ಒಳ್ಳೆ ಮಾತಿನಿಂದ ಲಾಗ ಹಾಕುತ್ತೀಯೋ, ಇಲ್ವೋ?' ಎಂದು ಕಳ್ಳರು ಗದರಿಸಿದರು. 'ಲಾಗ ಹಾಕ್ತೀನಣ್ಣ, ಆದರೆ ಡೋಲು ಬಾರಿಸದಿದ್ದರೆ, ನನಗೆ ಸ್ಫೂರ್ತಿ ಬರಲ್ಲ, ಮೊದಲು ಡೋಲು ಬಾರಿಸಿ' ಎಂದ. ಆಗ ಕಳ್ಳರು ಕಣ್‌ಕಣ್ ಬಿಟ್ಟರು.



***

ಒಂದು ದೊಡ್ಡ ಮಾಲ್. ಮಹಿಳೆಯರ ಉಡುಪುಗಳು ಸಿಗುವ ವಿಭಾಗದಲ್ಲಿ ಐದು ವರ್ಷದ ಬಾಲಕಿಯೊಬ್ಬಳು ಗಟ್ಟಿಯಾಗಿ ರೋದಿಸಿದಳು. ಅದನ್ನು ನೋಡಿದ ಸೇಲ್ಸ್‌ಮ್ಯಾನ್ ಬಾಲಕಿಯ ಬಳಿಗೆ ಬಂದು, ಅವಳನ್ನು ಸಮಾಧಾನಪಡಿಸಿ ಹೀಗೆ ಕೇಳಿದ.
ಸೇಲ್ಸ್‌ಮ್ಯಾನ್: ಬೇಬಿ, ಯಾಕೆ ಹೀಗೆ ಅಳ್ತಿದ್ದೀಯಾ?
ಬಾಲಕಿ: ಮಮ್ಮಿ ಎಲ್ಲೂ ಕಾಣಿಸ್ತಿಲ್ಲ.
ಸೇಲ್ಸ್‌ಮ್ಯಾನ್: ನೀನು ಮಮ್ಮಿಯ ಸೀರೆ ಹಿಡಿದುಕೊಳ್ಳಬೇಕಿತ್ತು.
ಬಾಲಕಿ: ಮಮ್ಮಿ ಸ್ಕರ್ಟ್ ಹಾಕಿಕೊಂಡಿದ್ದರು.
ಸೇಲ್ಸ್‌ಮ್ಯಾನ್: ಸ್ಕರ್ಟ್ ಅನ್ನೇ ಹಿಡಿದುಕೊಳ್ಳಬೇಕಿತ್ತು.
ಬಾಲಕಿ: ಅಲ್ಲಿಯವರೆಗೆ ನನ್ನ ಕೈ ಹೋಗ್ತಿರಲಿಲ್ಲ!

***

ಗಂಡ ವಿಪರೀತ ಸಿಗರೇಟು ಸೇದುವುದನ್ನು ಗಮನಿಸುತ್ತಿದ್ದ ಹೆಂಡತಿ ಅದೊಂದು ದಿನ ಸಿಟ್ಟನ್ನು ತಡೆದುಕೊಳ್ಳಲಾರದೆ ಹೇಳಿದಳು, 'ನೀವು ಸಿಗರೇಟನ್ನು ಬಿಟ್ಟರೆ, ಒಂದು ವರ್ಷದಲ್ಲಿ ನಾನು ಬಂಗಾರದ ನೆಕ್ಲೇಸ್ ಕೊಳ್ಳಬಹುದು' ಎಂದಳು. ಅದಕ್ಕುತ್ತರಿಸಿದ ಗಂಡ, 'ಪ್ರಯತ್ನ ಮಾಡ್ತೀನಿ' ಎಂದ. 'ಸಿಗರೇಟಿನ ಜೊತೆಗೆ ಎಲೆಅಡಿಕೆ ಜಗಿಯೋದನ್ನು ಬಿಟ್ಟರೆ ತಿಂಗಳಿಗೆ ಒಂದು ಸೀರೆನೂ ಕೊಳ್ಳಬಹುದು' ಎಂದಳು ಪತ್ನಿ. ಕೋಪಗೊಂಡ ಗಂಡ, 'ನೀನು ನನ್ನ ಬಿಟ್ಟರೆ, ಜಗತ್ತಿನ ಸಂತೋಷವನ್ನೆಲ್ಲಾ ಖರೀದಿಸಬಹುದು' ಎಂದು!

***

ಇಬ್ಬರು ಕುಡುಕರು ಒಂದು ನದಿಯನ್ನು ದಾಟಬೇಕಿತ್ತು. ಇಬ್ಬರೂ ದೋಣಿಯಲ್ಲಿ ಕೂತರು. ನದಿಯ ಮಧ್ಯಕ್ಕೆ ದೋಣಿ ಬಂದಾಗ ಅಲೆಗಳ ಹೊಡೆತಕ್ಕೆ ದೋಣಿ ಓಲಾಡಿತು. 'ಕೆಂಚಣ್ಣ, ದೋಣಿ ಮುಳುಗಿ ಹೋದ್ರೆ' ಎಂದು ಮಂಜಣ್ಣ ಗಾಬರಿಯನ್ನು ವ್ಯಕ್ತಪಡಿಸಿದ. 'ಮುಳುಗಿ ಹೋಗ್ಲಿ, ಮಂಜಣ್ಣ. ದೋಣಿಯವನು ನಮ್ಮ ಹತ್ರ ಹೆಚ್ಚು ದುಡ್ಡು ಇಸ್ಕೊಂಡಿದ್ದಾನೆ' ಎಂದು ಕೆಂಚಣ್ಣ ತೂರಾಡಿದ.

***

ಒಬ್ಬ ಅಪರಾಧಿ ಜೈಲಿನಿಂದ ತಪ್ಪಿಸಿಕೊಂಡು ಹೋಗಿದ್ದ. ಕೆಲವು ಪೊಲೀಸ್ ಠಾಣೆಗಳಿಗೆ ಅವನ ಆರು ವಿವಿಧ ಭಂಗಿಗಳ ಫೋಟೊಗಳನ್ನು ಕಳುಹಿಸಲಾಯಿತು. ಕೆಲವು ದಿನಗಳು ಕಳೆದವು. ಅದೊಂದು ದಿನ ಒಂದು ಠಾಣೆಯ ಇನ್ಸ್‌ಪೆಕ್ಟರ್ ಅವರ ಪತ್ರ ಹೆಡ್ ಕ್ವಾರ್ಟರ್ಸ್‌ಗೆ ಬಂತು. 'ಸಾರ್, ನೀವು ಕಳುಹಿಸಿದ ಫೋಟೊದಲ್ಲಿದ್ದ ಐವರನ್ನು ಬಂಧಿಸಲಾಗಿದೆ, ಆರನೆಯವನಿಗಾಗಿ ಹುಡುಕಾಟ ನಡೆಸಿದೆ. ಶೀಘ್ರವೇ ಅವನನ್ನೂ ಬಂಧಿಸಲಾಗುವುದು' ಎಂದು ಪತ್ರದಲ್ಲಿ ಬರೆಯಲಾಗಿತ್ತು. ಅದನ್ನು ಓದಿದ ಪೊಲೀಸ್ ಅಧಿಕಾರಿ ಮೂರ್ಛೆ ಹೋದ.

***

ಹಲ್ಲು ನೋವಿನಿಂದ ಬಳಲುತ್ತಿದ್ದ ವ್ಯಕ್ತಿಯೊಬ್ಬ ತನ್ನ ಪರಿಚಿತ ದಂತ ವೈದ್ಯರ ಬಳಿಗೆ ಹಲ್ಲು ಕೀಳಿಸಲು ಹೋದ. 'ಡಾಕ್ಟರ್, ನನಗೆ ಫೀಸ್‌ನಲ್ಲಿ ರಿಯಾಯತಿ ತೋರಿಸಿ. ನಿಮಗೆ ನನ್ನ ಗುರುತು ಇರಬೇಕು, ಈ ಹಿಂದೆ ನಾನು ನಿಮ್ಮ ಕ್ಲಿನಿಕ್‌ಗೆ ಎಷ್ಟೋ ಸಾರಿ ಬಂದಿದ್ದೇನೆ' ಎಂದ ರೋಗಿ. 'ಹೌದೌದು ಬಂದಿದ್ದೀರಾ. ಆದರೆ ನನ್ನ ಫೀಸ್ ಎಲ್ಲರಿಗೂ ಒಂದೇ. ನೀವು ಹಳೆ ಗಿರಾಕಿ, ಅದಕ್ಕಾಗಿ ನಿಮ್ಮ ಇನ್ನೊಂದು ಹಲ್ಲನ್ನು ಪುಕ್ಕಟೆಯಲ್ಲಿ ಕೀಳ್ತೀನಿ, ಅದಕ್ಕೆ ದುಡ್ಡು ಕೊಡಬೇಡಿ' ಎಂದು ದಂತ ವೈದ್ಯರು ಮೆಲ್ಲನೆ ಉಸುರಿದರು.

(ಸಂಗ್ರಹ) ಡಿ.ಎನ್. ಶ್ರೀನಾಥ್,
ಶಿವಮೊಗ್ಗ


